ತುಂಬಾ ಎಲ್ಲೆಂದರಲ್ಲಿ ಕಲ್ಲಾದ ಅಹಲ್ಯೆಯಂತೆ ಬಿದ್ದುಕೊಂಡಿದ್ದವು. ಹಗಲು ರಾತ್ರಿಯನ್ನದೆ ಅವುಗಳನ್ನು ಸಂದರ್ಶಿಸಿದ, ನೆನಪುಗಳನ್ನು ಮುಖಾಮುಖಿಯಾಗಿಸಿ ತಲೆ ಚಚ್ಚಿಕೊಂಡ. ಭೋ ಎಂದು ಅತ್ತ. ಇದು ಒಂದು ದಿನದ ಸಂಗತಿಯಲ್ಲ ಕನಿಷ್ಠ ಆರು ತಿಂಗಳು. ಇದರಿಂದ ಇವನ ಆರೋಗ್ಯ ಯದ್ವಾ ತದ್ವಾ ಕೆಟ್ಟು ಹೋಯಿತು. ಯಾರೂ ಇಲ್ಲದ ಆ ಹಾಸ್ಟೆಲಿನಲ್ಲಿ ಅನಾಥವಾಗಿ ಬಿದ್ದ ಈತನನ್ನು ಯಾರೋ ಪುಣ್ಯಾತ್ಮರು ಅದೇ ಊರಿನಲ್ಲಿರುವ ಚಿಕ್ಕಮ್ಮನ ಮನೆಗೆ ಸಾಗಿಸಿದ್ದರು. ದಿನ ದಿನಕ್ಕೂ ಕೃಶವಾಗುತ್ತಲೇ ಹೋದ.

ಈ ಪ್ರೇಮರೋಗಕ್ಕೆ ಡಾಕ್ಟರ್ ಕೊಟ್ಟ ಹೆಸರು ಜಾಂಡೀಸ್. ಈತನನ್ನು ಭೇಟಿಮಾಡಿದ ಗೆಳೆಯರೆಲ್ಲ ಒಂದೆ ನುಡಿಯ ಪದ ಹಾಡಿದ್ದರು– ಈತ ಉಳಿಯುವ ಭರವಸೆಯಿಲ್ಲ. ಊಟವಿಲ್ಲ ನಿದ್ರೆ ಇಲ್ಲ. ಮೈಯ್ಯಲ್ಲ ಹಳದಿ. ಮೂತ್ರವೂ ಹಳದಿ ಅರಷಿಣ.

ಅವಳಿಗೂ ಇವನು ಆರಾಮ ತಪ್ಪಿದ ವಿಷಯ ಗೊತ್ತಾಗಿ ಗುಜರಾತಿನಿಂದ ಓಡೋಡಿ ಬಂದಳು. ಅತ್ತಳು. ಗೋಳಾಡಿದಳು, ಮನೆಯವರನ್ನು ಶಪಿಸಿದಳು. ಅವಳು ತಂದಿದ್ದ ಕಬ್ಬಿನ ಹಾಲು ಹಣ್ಣು ತಿನ್ನಿಸಿದಳು. ಇವನು ಮಾತಾಡಿದ್ದು ಎರಡೇ ವಾಕ್ಯ: ಹಬ್ಬ ಹರಿದಿನಗಳಲ್ಲಿ ತನ್ನನ್ನು ಬಿಟ್ಟು ಊಟ ಮಾಡುತ್ತಿದ್ದಿಲ್ಲವಲ್ಲ... ಈಗ ಹಬ್ಬ ಮಾಡುವುದು ನಿಲ್ಲಿಸಿದ್ದೀಯಾ? ನಿನ್ನ ಸಾವಿರ ಪ್ರಮಾಣಗಳು ಏನು ಹೇಳುತ್ತವೆ? ಎಂದು ಕಣ್ಣು ಮುಚ್ಚಿ ನಿದ್ರೆಗೆ ಜಾರಿದ. ಆಮೇಲೆ ಅವಳು ಸಿಕ್ಕಿದ್ದು ಈಗ. ಹತ್ತು ವರ್ಷಗಳ ನಂತರ ಇವನ ಹಳೆಯ ನೆನಪುಗಳಿಂದ ಹೊರಬರುವುದಕ್ಕೂ ಅವಳು ಮೇಲ್ ಕಳಿಸುವುದು ಮುಗಿಯುವುದಕ್ಕೂ ಸರಿಹೋಯಿತು. ಅವಳಿಗೆ ಇವನ ಮೌನದ ಇರಿತ ಅರ್ಥವಾಗುತ್ತಿತ್ತು. ಒಂದು ಫೋಟೊ ತಂದಿದ್ದ. ಅದು ಇವನದು ಮತ್ತು ಅವಳದು. ಅದನ್ನು ಅವಳಿಗೆ ತೋರಿಸಿದ, 'ಓಹೊ ಚಂದ ಇದೆ, ಹಳೆಯ ನೆನಪು' ಎಂದು ಆಗಿಂದಾಗಲೇ ವಾಪಸು ಮಾಡಿದಳು. ಸಂಜಯ ಫೋಟೊ ಸ್ಟುಡಿಯೋದಲ್ಲಿ ತೆಗೆಸಿದ್ದ ಈ ಫೋಟೊ ತೆಗೆದ ದಿನವೇ ಸ್ಟುಡಿಯೋ ಶಾರ್ಟ್ ಸರ್ಕ್ಯೂಟ್‌ನಿಂದ ಭಸ್ಮವಾಗಿತ್ತು. ಆ ಭಸ್ಮವಾದ ಸ್ಟುಡಿಯೋದಲ್ಲಿ ಪವಾಡ ಸದೃಶವಾಗಿ ಉಳಿದುಕೊಂಡಿದ್ದು ಇದೊಂದೇ ಫೋಟೊ. ಸ್ಟುಡಿಯೋದವನಿಂದ ಇದನ್ನು ತಿಳಿದ ಇವಳು ನಮ್ಮ ಪ್ರೀತಿ ಅಮರ ನಮ್ಮ ಪ್ರೀತಿ ಅಮರ ಎಂದು ಮೆಲೋಡ್ರಾಮದಲ್ಲಿ ಚೀರಿದ್ದಳು. ಇಂದು ಅದರ ನೆನಪು ಇಲ್ಲದಂತೆ ವರ್ತಿಸುತ್ತಿದ್ದಾಳೆ ದ್ರೋಹಿ' ಅಂದುಕೊಂಡ.

ಇವನಿಗೆ ಸಿಟ್ಟು ಬಂದು ನಾನು ಹೋಗಲೇ ಎಂದು ಎದ್ದ. ನಿನಗೆ ಹೋಗಲು ಕರೆಸಿಲ್ಲ ದಯವಿಟ್ಟು ಕುಳಿತುಕೋ ಎಂದು ಮತ್ತೆ ಕಾಫಿ ತರಿಸಿದಳು. ಅವನ ಸಿಟ್ಟು ಉದ್ವೇಗಗಳು ಅವಳಿಗೆ ಅರ್ಥವಾಗುತ್ತಿದ್ದವು. ಮೌನವಾಗಿದ್ದ ಅವಳು ಒಮ್ಮಿಂದೊಮ್ಮಲೇ ಉಸುರಿದಳು. ಸಾರಿ ದೇವು ಭೂತಕಾಲವನ್ನು ಮರೆತು ನಾನು ಬಹುದೂರ ಬಂದಿದ್ದೇನೆ. ನನಗೆ ಉಳದಿರುವುದು ಎರಡೇ ಕಾಲಗಳು: ಒಂದು ವರ್ತಮಾನ ಇನ್ನೊಂದು ಭವಿಷ್ಯ. ದಯವಿಟ್ಟು ನಾನಿರುವುದು ಈ ದಿನ ಮಾತ್ರ. ಸಂಜೆ ಬೆಂಗಳೂರಿಗೆ ಹೋಗುತ್ತೇನೆ. ಅಲ್ಲಿಯವರೆಗೂ ನನ್ನ ಜೊತೆ ಇರುತ್ತೀಯಾ ಎಂಬ ನಂಬಿಕೆ ನನ್ನದು. ನಿನಗೆ ಇಷ್ಟವಿಲ್ಲದಿದ್ದರೂ ನೀನು ನನ್ನ ಜೊತೆ ಇರಲು ಪ್ರಾರ್ಥಿಸುತ್ತೇನೆ ಎಂದು ಎರಡು ಕೈ ಮುಗಿದಳು. ಇಂತಹ ಅವಳ ಪ್ರಾರ್ಥನೆಗಳು ಇವನನ್ನು ಅನೇಕ ಸಲ ಭಾವನಾತ್ಮಕವಾಗಿ ಬಂಧಿಸಿದ್ದವು. ಅವಳಿಗೆ ಪದೇ ಪದೇ ಫೋನ್ ಬರುತ್ತಿತ್ತು. ಒಂದು ಸಲ ಇಂಗ್ಲೀಷ್‌ನಲಿ, ಒಂದು ಸಲ ಹಿಂದಿಯಲಿ, ಮತ್ತೊಂದು ಸಲ ಕನ್ನಡದಲಿ. ಅವಳು ಮಾತಾಡುತ್ತಲೇ ಇದ್ದಳು. ಅವಳು ತನ್ನ ಜ್ಞಾನದ ಘನತೆಯ ಔನ್ನತ್ಯವನ್ನು ಸಾರುವ ಸಲುವಾಗಿ ಪದೇ ಪದೇ ಇಂಗ್ಲೀಷ್ ಹಿಂದಿ ಕನ್ನಡ ಎಂಬ ತ್ರಿಭಾಷಾ ಸೂತ್ರವನ್ನು ಪಾಲಿಸುತ್ತಿದ್ದಾಳೆ ಎಂಬುವದು ಇವನ ಅರಿವಿಗೆ ಬಂತು... ರೂಮ್ ಲಾಕ್ ಮಾಡಿ ಅವನನ್ನು ಕರೆದುಕೊಂಡು ಅವಳು ಇನ್ನೊವಾ ಗಾಡಿಯತ್ತ ಸಾಗಿದಳು. ಇನ್ನೋವಾ ಗಾಡಿಯಲ್ಲಿ ಅವನು ಬಬಿತಾ ಮತ್ತು ಡ್ರೈವರ್ ಮಾತ್ರ ಇದ್ದರು. ಅದು ವಾಡಿಯ ಕಡೆ ಪ್ರಯಾಣ ಬೆಳೆಸಿತ್ತು. ಅವಳ ಒಂದೂ ಮಾತು ತನ್ನ ಹಳೆಯ ಪ್ರೇಮದ ಪರಿಯ ಬಗ್ಗೆ ಇರುತ್ತಿರಲಿಲ್ಲ. ಎಡಬಲದ ಭೂಮಿ ಸಮತಟ್ಟು ಎಂಬ ಶಬ್ದವನ್ನು ಕಳೆದುಕೊಂಡು ಪೋಸ್ಟ್ ಮಾರ್ಟಮ್‌ಗೆ ಒಳಗಾದ ಶವದಂತೆ ಬಿದ್ದಿತ್ತು. ಇವಳ ಜೊತೆಯ ತನ್ನ ಅನಾಥ ನೆನಪುಗಳು ಹೀಗೆಯೇ ಕ್ವಾರಿಯ ಬಿಂಚಿ ಕಲ್ಲುಗಳಂತೆ, ತುಂಡು ತುಂಡಾಗಿ ಬಿದ್ದುಕೊಂಡಿದ್ದವು.